(ಇಂದು ದಿನಾಂಕ 20-08-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎಲ್ ಎನ್ (ಎಸ್) ವಕೀಲರಿಂದಃ**

ಫಿರ್ಯಾದನ್ನು ನಾನು ಸಲ್ಲಿಸಿಲ್ಲ ಎಂದರೆ ಸರಿ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನಗೆ ಅಧಿಕಾರ ಕೊಟ್ಟಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಅನ್ನುವುದು ಸರಿಯಲ್ಲ. ನಿಪಿ-5 ರಲ್ಲಿ ಸಿ.ಸಿ ನಂಬರನ್ನು ನಮೂದಿಸಿದಲ್ಲ ಎಂದರೆ ಸಾಕ್ಷಿ ಎಲ್ಲಾ ಕೇಸನ್ನು ನಡೆಸಲು ನನಗೆ ಅಧಿಕಾರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಠರಾವನ್ನು ಮಾಡಿ ನೇಮಕ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಿಪಿ-5 ನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆರೋಪಿಗೆ ನಾವು ವೈಯಕ್ತಿಕ ಸಾಲವನ್ನು ಮಂಜೂರು ಮಾಡಿದ್ದೇವೆ. ಆರೋಪಿತನ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಇಬ್ಬರು ಜಾಮೀನುದಾರರನ್ನು ಪಡೆದುಕೊಂಡು ಸಾಲವನ್ನು ಮಂಜೂರು ಮಾಡಿದ್ದೇವೆ. ಆರೋಪಿಯಿಂದ ಪಾನ್ ಕಾರ್ಡ , ಆಧಾರ ಕಾರ್ಡ , ಭಾವ ಚಿತ್ರ , ಬ್ಯಾಂಕ ಸ್ಟೇಟ್ ಮೆಂಟ್ , ಜಾಮೀನುದಾರರ ಆಧಾರ ಕಾರ್ಡ ಮತ್ತು ಭಾವ ಚಿತ್ರವನ್ನು ತೆಗೆದುಕೊಂಡಿದ್ದೇವೆ. ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾಗೆ ಸಂಬಂಧಪಟ್ಟಂತೆ ಬ್ಯಾಂಕ ಅಕೌಂಟ್ ನ ಸ್ಟೇಟ್ ಮೆಂಟ್ ತೆಗೆದುಕೊಂಡಿದ್ದೇವೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಆರೋಪಿ ನಮ್ಮ ಬ್ಯಾಂಕಿನಲ್ಲಿ 2022 ರಿಂದ ಷೇರು ಹೊಲ್ಡರ ಆಗಿದ್ದರು. ಷೇರು ಮೊತ್ತ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಸಂಬಂಧಪಟ್ಟಂತಹ ಷೇರು ಸರ್ಟಿಫಿಕೇಟ್ ನ್ನು ಹಾಜರು ಪಡಿಸಿಲ್ಲ. ಷೇರು ಸರ್ಟಿಫಿಕೇಟ್ ನ್ನು ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ಜಾಮೀನುದಾರರು 2022 ರಿಂದ ನಮ್ಮ ಸೊಸೈಟಿಯಲ್ಲಿ ಷೇರು ಹೊಲ್ಡರ್ ಆಗಿದ್ದಾರೆ. ಅವರಿಗೆ ಸಂಬಂಧಪಟ್ಟಂತೆ ತಲಾ 200/- ರಂತೆ ಷೇರು ಇತ್ತು.

ಜಾಮೀನುದಾರರು ಆಗಬೇಕೆಂದರೆ ಎಷ್ಟು ವರ್ಷದಿಂದ ಷೇರು ಹೊಲ್ಡರ ಇರಬೇಕು ಎಂದರೆ ಸಾಕ್ಷಿ ಆ ರೀತಿ ನಿಯಮ ಇಲ್ಲ ಎಂದು ಹೇಳುತ್ತಾರೆ. ಸಾಲ ಮಂಜೂರು ಆದ ನಂತರ ಎಷ್ಟು ಹಣ ಕಟ್ಟಿದ್ದಾರೆ ಎಂದು ನೆನಪಿಲ್ಲ. ಮೂರು ಕಂತುಗಳನ್ನು ಸತತವಾಗಿ ಕಟ್ಟದೇ ಇದ್ದಾಗ ನಮ್ಮ ಸೊಸೈಟಿಯಿಂದ ನೋಟಿಸನ್ನು ಕೊಡುತ್ತೇವೆ. 2023 ರ ನಂತರ ಆರೋಪಿಯ ಸಾಲ ಕಟಬಾಕಿಯಾಗಿದೆ. ಕಟಬಾಕಿಯಾದ ನಂತರ ಆರೋಪಿಗೆ ಮೂರು ಬಾರಿ ನೋಟಿಸನ್ನು ಕಳಿಸಿದ್ದೇವೆ. ಅದೇ ರೀತಿ ಜಾಮೀನುದಾರರಿಗೂ ಕಳಿಸಿದ್ದೇವೆ . ಸದರಿ ನೋಟಿಸಿನ ಪ್ರತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಆರೋಪಿಗೆ ಕಟಬಾಕಿಯಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಬೇರೆಯವರು ತೆಗೆದುಕೊಂಡ ಸಾಲಕ್ಕೆ ಜಾಮೀನುದಾರರು ಆಗಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸಾಲ ಕೊಡುವಾಗ ಅವರ ಬಳಿ ಯಾವುದೇ ಸರಿಯಾದ ದಾಖಾಲಾತಿಗಳು ಇಲ್ಲದೇ ಇದ್ದಾಗ ಭದ್ರತೆಗಾಗಿ ಚೆಕ್ ಗಳನ್ನು ಪಡೆಯುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 29-7-2024 ರಂದು ಆರೋಪಿಗೆ ವಕೀಲರ ಮುಖಾಂತರ ನೋಟಿಸನ್ನು ಕೊಟ್ಟಿದ್ದೇವೆ. ಸದರಿ ನೋಟಿಸು ಮರಳಿ ಬಂದಿದೆ. ಸದರಿಯವರು ವಿಳಾಸದಲ್ಲಿ ಇಲ್ಲ ಎಂದು ಮರಳಿ ಬಂದಿದೆ. ಪುನಃ ಆರೋಪಿ ಯಾವ ವಿಳಾಸದಲ್ಲಿ ವಾಸವಾಗಿದ್ದಾರೆ ಎಂದು ತಿಳಿದುಕೊಂಡು ಮತ್ತೊಮ್ಮೆ ನೊಟಿಸನ್ನು ಕೊಟ್ಟಿಲ್ಲ ಎಂದರೆ ಸರಿ. ವಿಳಾಸದಲ್ಲಿ ಇಲ್ಲ ಎಂದರೆ ನೋಟಿಸು ಜಾರಿಯಾಗಿದೆ ಎಂಬ ಪೂರ್ವ ಭಾವನೆ ಬರುವುದಿಲ್ಲ ಎಂದರೆ ಸರಿ. ಆರೋಪಿಗೆ ನೋಟಿಸು ಜಾರಿಯಾಗದೇ ಇರುವುದರಿಂದ ನಾವು ಹಾಕಿದಂತಹ ಪ್ರಕರಣ ಊರ್ಜಿತವಾಗುವುದಿಲ್ಲ ಅನ್ನುವುದು ಸರಿಯಲ್ಲ. ನಾವು ಸುಳ್ಳು ಪ್ರಕರಣ ದಾಖಲಿಸುವ ಉದ್ದೇಶದಿಂದ ಸರಿಯಾಗಿ ವಿಳಾಸವನ್ನು ತೋರಿಸದೇ ನೋಟಿಸನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ರ ಮೇಲೆ ನಮೂದಿಸಿರುವ ತಾರೀಖಿನಲ್ಲಿ ತಿದ್ದುಪಡಿಯಾಗಿದೆ ಎಂದರೆ ಅವರೇ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಪಿ-1ರ ಮೇಲಿರುವ ಬರವಣಿಗೆ ಆರೋಪಿತನದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-1 ರ

ಮೇಲಿರುವ ತಾರೀಖನ್ನು ನಾನೇ ನಮೂದಿಸಿ ಚೆಕ್ ನ್ನು ನಾವೇ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ಕೊಟ್ಟಿದ್ದಾರೆ ಎಂದು ಹೇಳಲಾದ ದಿನಾಂಕದಂದು ಒಟ್ಟೂ ರೂ. 98,924/- ಬಾಕಿ ಇತ್ತು. ಸದರಿ ಮೊತ್ತ ನಾವು ಹಾಜರು ಪಡಿಸಿದಂತಹ ಬ್ಯಾಂಕ ಸ್ಟೇಟ್ ಮೆಂಟ್ ನಲ್ಲಿ ಆ ದಿನಾಂಕದಂದು ಅಷ್ಟು ಮೊತ್ತ ನಮೂದಿಸಿಲ್ಲ ಎಂದರೆ ಸರಿ. ನಾವು ಆರೋಪಿಗೆ ಎಷ್ಟು ಹಣ ಎಂದು ಹೇಳಿದ್ದರ ಮೇರೆಗೆ ಆತ ಚೆಕ್ ನ ಮೇಲೆ ಅಷ್ಟು ಹಣವನ್ನು ನಮೂದಿಸಿ ಕೊಟ್ಟಿದ್ದಾನೆ. ನಾವು ಸಾಲದ ಮೊತ್ತ ಮತ್ತು ಇನ್ನುಳಿದ ಖರ್ಚುಗಳನ್ನು ತಾಳೆ ಹಾಕಿ ಆರೋಪಿಗೆ ಎಷ್ಟು ಹಣ ಎಂದು ಹೇಳಿದ್ದೇವೆ. ಸದರಿ ಹಣ ಸ್ಟೇಟ್ ಮೆಂಟ್ ನಲ್ಲಿ ನಮೂದಾಗಬೇಕು ಎಂದರೆ ಸಾಕ್ಷಿ ಸಾಲದ ಮೊತ್ತ ಬಡ್ಡಿ ಹಣ ಮತ್ತು ಇತರೇ ಖರ್ಚುಗಳು ಎಲ್ಲಾ ಸೇರುವುದರಿಂದ ಆ ಹಣ ಸ್ಟೇಟ್ ಮೆಂಟ್ ನಲ್ಲಿ ಬರುವುದಿಲ್ಲ ಎಂದು ಹೇಳುತ್ತಾರೆ.

ಆರೋಪಿಗೆ ನೋಟಿಸು ಕೊಡಲು ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ಕೊಟ್ಟಿದ್ದೇನೆ. ವಕೀಲರಿಗೆ ಸಾಲ ಬಡ್ಡಿ ಮತ್ತು ಇತರೇ ಖರ್ಚುಗಳು ಅಷ್ಟು ಬರುತ್ತದೆ ಎಂದು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಆ ರೀತಿ ನೋಟಿಸಿನಲ್ಲಿ ಬರೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಸೇರಿ ಬರೆದಿದ್ದಾರೆ ಎಂದು ಹೇಳುತ್ತಾರೆ. ಆರೋಪಿ ಯಾವುದೇ ಚೆಕ್ ನ್ನು ನಮಗೆ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಬೇರೆಯವರಿಗೆ ಜಾಮೀನು ಆಗುವಾಗ ಅವರಿಂದ ಭದ್ರತೆಗಾಗಿ ಪಡೆದುಕೊಂಡಂತಹ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

ಆರೋಪಿಗೆ ಕೊಟ್ಟಂತಹ ಸಾಲವನ್ನು ಮೂರು ವರ್ಷದಲ್ಲಿ ಸಮಾನ ಕಂತುಗಳಲ್ಲಿ ಕಟ್ಟಲು ಎಂದು ಶರತ್ತು ಇತ್ತು. ಒಂದು ಕಂತಿಗೆ ರೂ. 3,000/-ಚಿಲ್ಲರೆ ಹಣ ಬರುತ್ತಿತ್ತು. ಆರೋಪಿ 2023 ರವರೆಗೆ ಕಂತನ್ನು ಕಟ್ಟಿದ್ದು ಎಷ್ಟು ಕಟ್ಟಿದ್ದಾರೆ ಎಂದು ಹೇಳಲು ಬರುವುದಿಲ್ಲ. ನನ್ನ ಪ್ರಕಾರ ನಮ್ಮ ಬ್ಯಾಂಕಿಗೆ ಎಷ್ಟು ಹಣವನ್ನು ಆರೋಪಿ ಕಟ್ಟಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ